# ನಿಗೂಢ ಹೆಜ್ಜೆಯ ನಿಪುಣ ತಂತ್ರಗಾರ



■ ಪ್ರವೀಣ ಕುಲಕರ್ಣಿ

ಭಾರತದ ಎಲ್ಲ ರಾಜಕೀಯ ಪಕ್ಷಗಳೂ ಕೌತುಕದಿಂದ ನೋಡುವಂತಹ ವ್ಯಕ್ತಿ ಇವರು. 'ನಾನು ಟಿ.ವಿ.ಯಲ್ಲಿ ಸುದ್ದಿಯನ್ನು ನೋಡುವುದೇ ಅಪರೂಪ. ಪತ್ರಿಕೆಗಳನ್ನೂ ಓದುವುದಿಲ್ಲ. ಕಳೆದ ಒಂದು ದಶಕದಲ್ಲಿ ಒಂದೇ ಒಂದು ಇ–ಮೇಲ್ ಅನ್ನು ಮಾಡಿಲ್ಲ, ಯಾವ ವಿಧದ ನೋಟ್ಸ್ ಅನ್ನೂ ಮಾಡಿಕೊಂಡಿಲ್ಲ. ಲ್ಯಾಪ್‌ಟಾಪ್ ಕೂಡ ಬಳಕೆ ಮಾಡಿದವನಲ್ಲ' ಎಂದೆನ್ನುವ ಈ ವ್ಯಕ್ತಿ ತುಂಬಾ ನಿಗೂಢ. ಹಾಗಾದರೆ ಈತ ದೇಶದ ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸುತ್ತಿರುವುದು ಹೇಗೆ ಎಂಬ ಪ್ರಶ್ನೆ ಎಂಥವರನ್ನೂ ಗಾಢವಾಗಿ ಕಾಡುತ್ತದೆ.

ಹೌದು, ಇಲ್ಲಿ ಪ್ರಸ್ತಾಪ ಮಾಡಲು ಹೊರಟಿದ್ದು ರಾಜಕೀಯ ತಂತ್ರಗಾರಿಕೆಯಲ್ಲಿ ಹೆಸರಾದ ಪ್ರಶಾಂತ್ ಕಿಶೋರ್ ಅವರ ವಿಷಯವಾಗಿಯೇ. 'ಜನ್ ಸ್ವರಾಜ್' ಎಂಬ ರಾಜಕೀಯೇತರ ವೇದಿಕೆಯನ್ನು ಕಟ್ಟುವ ಪ್ರಸ್ತಾಪ ಮಾಡಿರುವ ಕಿಶೋರ್, ತವರು ರಾಜ್ಯ ಬಿಹಾರದಲ್ಲಿ ಜನಜಾಗೃತಿ ಮೂಡಿಸಲು ಪಾದಯಾತ್ರೆ ನಡೆಸುವ ಮಾತುಗಳನ್ನೂ ಆಡಿದ್ದಾರೆ.

ತಂತ್ರಗಾರನಾಗಿ ಹೆಸರಾದರೂ ತಂತ್ರಜ್ಞಾನವನ್ನು ಅವರು ಅಷ್ಟಾಗಿ ಬಳಸಿದವರಲ್ಲ. ಸದಾ ಸುದ್ದಿಯಲ್ಲಿದ್ದರೂ ಸುದ್ದಿ ಸಂತೆಯಲ್ಲಿ ಮುಳುಗಿದವರು ಕೂಡ ಅಲ್ಲ. 'ನಾನು ಬಳಸುತ್ತಿರುವ ಏಕೈಕ ಸಾಧನವೆಂದರೆ ಅದು ನನ್ನ ಮೊಬೈಲ್. ಆ ಸಾಧನದಿಂದ ನಾನು ಕಳೆದ ಮೂರು ವರ್ಷಗಳಲ್ಲಿ 86 ಟ್ವೀಟ್‌ಗಳನ್ನು ಮಾಡಿದ್ದೇನೆ ಅಷ್ಟೆ' ಎಂದು ಮುಗುಳ್ನಗೆ ಬೀರುತ್ತಾರೆ ಅವರು.

'ಕೆಲಸ ಬಿಟ್ಟು ನನಗೆ ಬೇರೇನೂ ಗೊತ್ತಿಲ್ಲ. ಕೆಲಸ ಮತ್ತು ಜೀವನ ಎರಡನ್ನೂ ಸಮತೋಲನದಿಂದ ನಡೆಸಬೇಕು ಎಂಬ ಮಾತಿನಲ್ಲಿ ನಂಬಿಕೆ ಇಟ್ಟವನೂ ಅಲ್ಲ' ಎನ್ನುತ್ತಾರೆ ಕಿಶೋರ್. ರಾಜಕಾರಣಿಗಳ ಪರವಾಗಿ ಯಶಸ್ವಿ ಪ್ರಚಾರ ನಡೆಸಿರುವ ಅವರು, ಚುನಾವಣೆಯಲ್ಲಿ ಗೆಲುವನ್ನು ಒಲಿಸಿಕೊಳ್ಳುವ, ಜನರನ್ನು ಪ್ರಭಾವಿಸುವ ತಂತ್ರಗಾರನಾಗಿ ಹೆಸರಾಗಿದ್ದಾರೆ. 2011ರಿಂದ ಇಲ್ಲಿಯವರೆಗೆ ಕಿಶೋರ್ ಅವರ ತಂಡ ಒಂಬತ್ತು ಚುನಾವಣೆಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಗೆ ಸಲಹೆಗಾರನಾಗಿ, ಪ್ರಚಾರದ ನಿರ್ವಾಹಕನಾಗಿ ಕೆಲಸ ಮಾಡಿದೆ. ಆ ಪೈಕಿ ಎಂಟು ಚುನಾವಣೆಗಳಲ್ಲಿ ಕಿಶೋರ್ ಯಾವ ಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆಯೋ ಅದೇ ಪಕ್ಷ ಜಯಿಸಿದೆ. ಡಿಸ್ನಿ, ನೆಟ್‌ಫ್ಲಿಕ್ಸ್, ಅಷ್ಟೇ ಏಕೆ, ಬಾಲಿವುಡ್‌ನ ಬಾದ್‌ಶಾ ಶಾರುಖ್ ಖಾನ್ ಅವರ ಸಂಸ್ಥೆ ಸಹ ಕಿಶೋರ್ ಅವರ ಬಯೋಪಿಕ್ ಮಾಡಲು ಮುಂದೆ ಬಂದಿವೆ. ಆದರೆ, ಎಲ್ಲ ಆಫರ್‌ಗಳಿಗೆ ಈ ತಂತ್ರಗಾರ 'ನೋ' ಎಂದಿದ್ದಾರೆ.

2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿ ಗದ್ದುಗೆಗೆ ಏರುವಲ್ಲಿ ಯಶಸ್ವಿ ಪ್ರಚಾರ ನಡೆಸಿದವರು ಸಹ ಇದೇ ಕಿಶೋರ್. ಮುಂದೆ ಮೋದಿ ಅವರ ಬದ್ಧ ವೈರಿ ಎನಿಸಿದ ಮಮತಾ ಅವರ ಪಾಳೆಯದಲ್ಲಿ ಕಾಣಿಸಿಕೊಂಡು ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಗೆಲುವಿಗೂ ತಂತ್ರವನ್ನು ಹೆಣೆದವರು. ಕಿಶೋರ್ ಅವರ ಅಭಿಮಾನಿಗಳು ತಮ್ಮ ನೆಚ್ಚಿನ ತಾರೆ ಮುಟ್ಟಿದ್ದೆಲ್ಲ ಚಿನ್ನವಾಗುತ್ತದೆ ಎಂದು ಹಾಡಿಹೊಗಳಿದರೆ, ಅವರ ವಿರೋಧಿಗಳು ಗೆಲ್ಲುವ ಗಿರಾಕಿಗಳನ್ನೇ ಅವರು ಹುಷಾರಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಕುಟುಕುತ್ತಾರೆ. ಅಭಿಪ್ರಾಯಗಳು ಏನೇ ಇದ್ದರೂ ಅಭಿಮಾನಿಗಳು ಹಾಗೂ ವಿರೋಧಿಗಳು 45ರ ಹರೆಯದ ಈ ಚಾಣಾಕ್ಷನ ನಡೆಯತ್ತ ಕಣ್ಣು ನೆಟ್ಟಿದ್ದಾರೆ.

ಮೋದಿ ಅವರನ್ನು ಎದುರಿಸಲು ವಿರೋಧ ಪಕ್ಷಗಳು ಹೆಣಗಾಟ ನಡೆಸಿರುವ ಈ ಹೊತ್ತಿನಲ್ಲಿ, 'ಬಿಜೆಪಿಯೇನೂ ಮೇಲಿನಿಂದ ಇಳಿದುಬಂದ ಪಕ್ಷವಲ್ಲ. ಅಧಿಕಾರದಿಂದ ಆ ಪಕ್ಷವನ್ನು ಇಳಿಸಲಾಗದು ಎಂಬ ವಾದದಲ್ಲಿ ನನಗೆ ನಂಬಿಕೆ ಇಲ್ಲ' ಎಂದು ವಿಶ್ವಾಸದಿಂದ ಹೇಳುತ್ತಾರೆ ಕಿಶೋರ್. 'ಭಾರತದಲ್ಲಿ ಮೈತ್ರಿಕೂಟ ಯಶಸ್ವಿಯಾಗದು. ಈಗಾಗಲೇ ಅಂತಹ ವ್ಯವಸ್ಥೆ ಪರೀಕ್ಷೆಗೊಳಗಾಗಿದ್ದು ಸುಸ್ಥಿರವಲ್ಲ ಎನ್ನುವುದು ನಿರೂಪಿತವಾಗಿದೆ' ಎಂದೂ ಅವರು ವಿಶ್ಲೇಷಿಸುತ್ತಾರೆ.

ಕಿಶೋರ್ ಅವರ 'ಭಾರತೀಯ ರಾಜಕೀಯ ಕ್ರಿಯಾ ಸಮಿತಿ' (ಐಪ್ಯಾಕ್) 4000 ಜನರಿಗೆ ಕೆಲಸ ನೀಡಿದೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅವರು ಐಪ್ಯಾಕ್‌ನ ಜತೆ ಒಪ್ಪಂದ ಮಾಡಿಕೊಂಡ ರಾಜಕೀಯ ಪಕ್ಷದ ಪರವಾಗಿ ಕೆಲಸ ಮಾಡುತ್ತಾರೆ. ಚುನಾವಣಾ ಸಂದರ್ಭದಲ್ಲಿ ರಾಜಕೀಯ ಪಕ್ಷದ ಗೆಲುವಿಗೆ ಅಗತ್ಯವಾದ ತಂತ್ರ ಹೆಣೆಯುವ ಜತೆಗೆ ಅವರ ಜತೆ ಹಗಲಿರುಳು ಕೆಲಸವನ್ನೂ ಮಾಡುತ್ತೇವೆ ಎನ್ನುತ್ತಾರೆ. ಧ್ರುವೀಕರಣ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ದೊಡ್ಡ ರ‍್ಯಾಲಿಗಳಷ್ಟೇ ಮತ ತಂದುಕೊಡುತ್ತವೆ ಎಂಬ ಭ್ರಮೆ ಇಟ್ಟುಕೊಳ್ಳಬಾರದು ಎಂದು ಖಡಕ್ ಸಂದೇಶವನ್ನೂ ನೀಡುತ್ತಾರೆ. ಜನ ಏನು ಹೇಳುತ್ತಾರೆ (ಈ ಮಾಹಿತಿಯನ್ನು ಕಲೆಹಾಕಲು ತರಬೇತಿ ಹೊಂದಿದ ಪಡೆಯನ್ನು ಅವರು ಹಳ್ಳಿ ಹಳ್ಳಿಗೂ ಕಳಿಸುತ್ತಾರೆ), ಅದಕ್ಕೆ ರಾಜಕೀಯ ಪಕ್ಷ ಹೇಗೆ ಪ್ರತಿಸ್ಪಂದಿಸಬೇಕು ಎಂಬುದನ್ನು ಸರಿಯಾಗಿ ಗ್ರಹಿಸುವ ಕಿಶೋರ್, ಅದಕ್ಕೆ ತಕ್ಕಂತೆ ತಂತ್ರ ಹೆಣೆಯುತ್ತಾರೆ.

ಬಿಹಾರದ 2015ರ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಕಿಶೋರ್ ಅವರ ತಂಡ ಹೀಗೆ ಹಳ್ಳಿ–ಹಳ್ಳಿಗೂ ಹೋದಾಗ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದೇ ಅಲ್ಲಿನ ಜನರ ದೊಡ್ಡ ಸಮಸ್ಯೆ ಎಂದು ಗೊತ್ತಾಯಿತು. ಪೊಲೀಸ್ ಠಾಣೆಯಲ್ಲಿ ಪ್ರತೀ ಐದು ಪ್ರಕರಣಗಳಲ್ಲಿ ಒಂದು ಒಳಚರಂಡಿಗೆ ಸಂಬಂಧಿಸಿದ ವಿವಾದವಾಗಿದ್ದನ್ನೂ ಅವರ ತಂಡ ಗುರ್ತಿಸಿತು. ಹೀಗೆ ಜನರ ನಾಡಿಮಿಡಿತವನ್ನು ಗುರ್ತಿಸುವಲ್ಲಿ ಅವರು ನಿಸ್ಸೀಮರು. ಅಂತಹ ವಿಷಯದಲ್ಲಿ ಪಕ್ಷದ ನಿಲುವು ಏನಿರಬೇಕು, ಅದನ್ನು ಹೇಗೆ ಪ್ರಚಾರ ಮಾಡಬೇಕು ಎಂಬುದನ್ನು ಕಿಶೋರ್ ನೇತೃತ್ವದ ಐಪ್ಯಾಕ್‌ನ ಚಿಂತಕರ ಚಾವಡಿ ನಿರ್ಧರಿಸುತ್ತದೆ. ಬಿಜೆಪಿ, ಜೆಡಿಯು, ಕಾಂಗ್ರೆಸ್, ಎಎಪಿ, ವೈಎಸ್‌ಆರ್‌ಸಿಪಿ, ಡಿಎಂಕೆ ಮತ್ತು ಟಿಎಂಸಿ ಪಕ್ಷಗಳ ಯಶಸ್ಸಿಗೆ ಕೊಡುಗೆ ನೀಡಿರುವ ಕಿಶೋರ್, ಮುಂದಿನ ಚುನಾವಣೆಯಲ್ಲಿ ಯಾರ ಪಾಳೆಯದಲ್ಲಿ ಕಾಣಿಸಿಕೊಳ್ಳಲಿದ್ದಾರೆಯೋ ಏನೋ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65